# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2733** |
| ಸದಸ್ಯರ ಹೆಸರು | : | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 28-03-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ 2015ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಮೀಸಲಾತಿಯ ಅಡಿಯಲ್ಲಿ ಸಹಾಯಕ ಲೆಕ್ಕಾಧಿಕಾರಿ ಹಾಗೂ ಸಹಾಯಕ ಇಂಜಿನಿಯರ್ (ವಿ) ಹುದ್ದೆಗೆ ನೇಮಕಾತಿ ಮಾಡುವ ಸಂದರ್ಭದಲ್ಲಿ ಆದೇಶ ಸಂಖ್ಯೆ:ಇಒ/77/ಇಇ:2014/04-02-2015 ರ ಅನ್ವಯ ಶೇ.8%ರ ಅನುಸಾರ ನೇಮಕಾತಿ ಮಾಡಲಾಗಿದೆಯೇ; (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಕಛೇರಿಗಳಲ್ಲಿ ಕಲ್ಯಾಣ-ಕರ್ನಾಟಕ ಪ್ರಾದೇಶಿಕ ಮೀಸಲಾತಿಯ ಅಡಿಯಲ್ಲಿ ಶೇ.8%ರ ಅನುಸಾರ ಈ ಕೆಳಗಿನಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ:<br>1. ಸಹಾಯಕ ಇಂಜಿನಿಯರ್ (ವಿದ್ಯುತ್)- 14.<br>2. ಸಹಾಯಕ ಇಂಜಿನಿಯರ್ (ಸಿವಿಲ್)- 1.<br>3. ಸಹಾಯಕ ಲೆಕ್ಕಾಧಿಕಾರಿ - 3. |
| ಆ) | ಈ ಆದೇಶದ ಅನುಸಾರ ನೇಮಕಾತಿ ಹೊಂದಿರುವ ಸಹಾಯಕ ಲೆಕ್ಕಾಧಿಕಾರಿಗಳಿಗೆ ಹಾಗೂ ಸಹಾಯಕ ಇಂಜಿನಿಯರ್ (ವಿ) ಸಿಆಸುಇ 39 ಹೈಕಕೋ 2018/ 21-06-2018ರ ಅನ್ವಯ ಅನುಚ್ಛೇದ 371ಜೆ ಅಡಿಯ ನಿಯಮಾವಳಿಗಳನ್ನು ಅನುಸರಿಸಿ ಪದೋನ್ನತಿ ನೀಡಲಾಗಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಿಆಸುಇ 39 ಹೈಕಕೋ 2018, ದಿನಾಂಕ: 21.06.2018 ರ ಅನ್ವಯ ಬೆವಿಕಂನಲ್ಲಿ ಶೇ.8% ಹುದ್ದೆಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆ.<br><br>ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ದಿನಾಂಕ: 04.02.2015 ರ ಪತ್ರದಲ್ಲಿನ ಸೂಚನೆಗಳಂತೆ ಕವಿಪ್ರನಿನಿ ಮತ್ತು ವಿಸಕಂಗಳು ಪ್ರತ್ಯೇಕವಾಗಿ ನೇರ ನೇಮಕಾತಿ ಮಾಡುವ ಮೂಲಕ ಈ ಹಿಂದೆ ಕವಿಪ್ರನಿನಿ ಮೂಲಕ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ಜೇಷ್ಠತೆಗೆ ದಕ್ಕೆ ಉಂಟಾಗದಂತೆ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ:<br>1. ಈ ಹಿಂದೆ ಕವಿಪ್ರನಿನಿ ಮೂಲಕ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾ ಜೇಷ್ಠತೆಯನ್ನು ಯತಾವತ್ತಾಗಿ ಹಿಂದಿನಂತೆಯೇ ಮುಂದುವರೆಸತಕ್ಕದ್ದು ಹಾಗೂ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿ ಮುಂದಿನ ಹುದ್ದೆಗೆ ಪದೋನ್ನತಿ ಹೊಂದುವವರೆಗೆ ವಿಸಕಂಗಳ ಮೂಲಕ ನೇಮಕಾತಿ ಹೊಂದುವ ಸಿಬ್ಬಂದಿಗಳನ್ನು ಪದೋನ್ನತಿಗೆ ಪರಿಗಣಿಸದೆ ಅವರು ಈಗಾಗಲೇ ಕವಿಪ್ರನಿನಿ ಮೂಲಕ ನೇಮಕಾತಿ ಹೊಂದಿರುವ ಸಿಬ್ಬಂದಿಗಳಿಗೆ ಸೇವಾ ಜೇಷ್ಠತೆಯಲ್ಲಿ ಕಿರಿಯರೆಂದು ಪರಿಗಣಿಸತಕ್ಕದ್ದು ಎಂದು ಮತ್ತು ಸದರಿ ಷರತ್ತನ್ನು ಕಂಪನಿವಾರು ನೇಮಕ ಹೊಂದುವ ಸಿಬ್ಬಂದಿಗಳಿಗೆ ಜಾರಿಗೊಳಿಸುವ ನೇಮಕಾತಿ ಆದೇಶದಲ್ಲಿ ನಮೂದಿಸುವುದು ಎಂದು ತಿಳಿಸಿದೆ. |
| ಇ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಸಹಾಯಕ ಲೆಕ್ಕಾಧಿಕಾರಿಗಳಿಗೆ ಹಾಗೂ ಸಹಾಯಕ ಇಂಜಿನಿಯರ್‌ಗಳಿಗೆ (ವಿ) ಸಂದರ್ಭದಲ್ಲಿ ಸಿಆಸುಇ 39 ಹೈಕಕೋ 2018/21-06-2018ರ ಅನ್ವಯ ಅನುಚ್ಛೇದ 371ಜೆ ಅಡಿಯಲ್ಲಿ ಶೇ. 8%ರ ಅನುಸಾರ ಪದೋನ್ನತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |

...2

| | | |
|---|---|---|
| | | 2. ಅಧಿಕಾರಿಗಳು/ನೌಕರರಿಂದ ಸಹಮತ ಪಡೆದು ಕಂಪನಿವಾರು ಮರುನಿಯೋಜನೆ ಮಾಡುವ ಪ್ರಕ್ರಿಯೆ (Unbundling) ಪೂರ್ಣಗೊಳುವವರೆಗೆ ಇನ್ನುಮುಂದೆ ಕಂಪನಿವಾರು ಪ್ರತ್ಯೇಕವಾಗಿ ನೇರ ನೇಮಕಾತಿ ಹೊಂದುವ ಸಿಬ್ಬಂದಿಗಳಿಗೆ ಬಡ್ತಿ ನೀಡುವ ಅನಿವಾರ್ಯತೆ ಬಂದಾಗ ಕವಿಪ್ರನಿನಿ ಮತ್ತು ಸಂಬಂಧ ಪಟ್ಟ ವಿಸಕಂಗಳ ವ್ಯವಸ್ಥಾಪಕ ನಿರ್ದೇಶಕರುಗಳು ಪರಸ್ಪರ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳತಕ್ಕದ್ದು ಎಂದು ತಿಳಿಸಿದೆ.<br><br>ಅದರಂತೆ, ಪ್ರಸ್ತುತ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಪ್ರತ್ಯೇಕವಾಗಿ ನೇಮಕಾತಿ ಹೊಂದಿದ ಕೆಲವು ಸಹಾಯಕ ಲೆಕ್ಕಾಧಿಕಾರಿಗಳು ಮತ್ತು ಸಹಾಯಕ ಇಂಜಿನಿಯರ್ (ವಿ) ಗಳು ಮುಂದಿನ ಹುದ್ದೆಗೆ ಪದೋನ್ನತಿ ಹೊಂದಲು ಪ್ರಸ್ತುತ ಅರ್ಹತೆಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ದಿನಾಂಕ: 04.02.2015 ರ ಪತ್ರದಲ್ಲಿನ ಸೂಚನೆಗಳಂತೆ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳು ಪರಸ್ಪರ ಸಮಾಲೋಚಿಸಿ ನಿಯಮಾನುಸಾರ ಮುಂದಿನ ಕ್ರಮಗಳನ್ನು ಜರುಗಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.<br><br>ಆದ್ದರಿಂದ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಲ್ಯಾಣ-ಕರ್ನಾಟಕ ಪ್ರಾದೇಶಿಕ ಮೀಸಲಾತಿ ಅಡಿಯಲ್ಲಿ ನೇಮಕಾತಿ ಹೊಂದಿರುವ ಸಹಾಯಕ ಲೆಕ್ಕಾಧಿಕಾರಿಗಳಿಗೆ ಮತ್ತು ಸಹಾಯಕ ಇಂಜಿನಿಯರ್ (ವಿ) ಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 39 ಹೈಕಕೋ 2018 ದಿನಾಂಕ: 21.06.2018 ರ ಅನ್ವಯ ಪದೋನ್ನತಿ ನೀಡುವ ಪ್ರಕ್ರಿಯೆಯನ್ನು ಆರಂಭಿಸಬೇಕಿರುತ್ತದೆ. |

ಸಂಖ್ಯೆ: ಎನರ್ಜಿ 88 ಇಬಿಎಸ್ 2022

(ವಿ ಸುನೀಲ್ ಕುಮಾರ್)
ಮಾನ್ಯ ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು